

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ವಿಶ್ವವಿದ್ಯಾನಿಲಯಗಳ ನೈತಿಕ, ಬೌದ್ಧಿಕ ದಿವಾಳಿತನ!....

ಎರಡು ವಾರಗಳ ಹಿಂದೆ ಗುರುವಾರದ 'ನೂರೆಂಟುಮಾತಿ'ನ ಅಂಕಣದಲ್ಲಿ ಸಂಪಾದಕರಾದ ಶ್ರೀ ವಿಶ್ವೇಶ್ವರ ಭಟ್ಟರು ಬರೆದ "ಆಲದ ಹೂವು ಹೂವಲ್ಲ, ಗೌರವ ಡಾಕ್ಟರೇಟ್ ಪದವಿಯಲ್ಲ" ಎಂಬ ಲೇಖನವನ್ನು ನೀವು ಓದಿರಬಹುದು. ಇಲ್ಲದಿದ್ದರೆ ಹಳೆಯ ಪತ್ರಿಕೆಗಳನ್ನು ತಿರುವಿಹಾಕಿ ಓದುವುದು ಒಳ್ಳೆಯದು. ಈ ಗೌರವ ಡಾಕ್ಟರೇಟ್ ಪದವಿಯ ಗೀಳು ಸರ್ವಸಂಗಪರಿತ್ಯಾಗಿಗಳೆನಿಸಿದ ಅನೇಕ ಮಠದ ಸ್ವಾಮಿಗಳಿಗೇ ಇರುವಾಗ ಮುಖ್ಯಮಂತ್ರಿಗಳಾದ ಯಡಿಯೂರಪ್ಪನವರಿಗೆ ಇದ್ದರೆ ತಪ್ಪೇನೂ ಇಲ್ಲ. ಫೋಟೋ ನೋಡಿದರೆ ಗೌನಿನಲ್ಲಿ ಯಡಿಯೂರಪ್ಪನವರು ಕಲಾಂರವರಿಗಿಂತ ಚೆನ್ನಾಗಿ ಕಾಣಿಸುತ್ತಾರೆ ಎಂದು ಯಾರಿಗಾದರೂ ಅನ್ನಿಸದಿರದು. ಅಮೇರಿಕದಿಂದ ಬಂದೊಡನೆಯೇ ತಮ್ಮ ಹಳೆ ನಾಮಫಲಕವನ್ನು ಬದಲಾಯಿಸಿ ತಮ್ಮ ಹೆಸರಿನ ಹಿಂದೆ 'ಡಾ.' ಎಂದು ಹೊಸ ನಾಮಫಲಕವನ್ನು ಬರೆಯಿಸಿ ಅದಕ್ಕೆ ಹಾರ ಹಾಕಿಸಿಕೊಂಡರೆಂದು ಆಕ್ಷೇಪಿಸುವುದು ಬೇಡ. Let him have the little pleasure! ತಮ್ಮ ಆಡಳಿತಾವಧಿಯಲ್ಲಿ ನಮ್ಮ ಹಳ್ಳಿಗಳ ಆಸ್ಪತ್ರೆಗಳಲ್ಲಿ ವೈದ್ಯರು, ನರ್ಸುಗಳು ಮತ್ತು ಕಾಂಪೌಂಡರುಗಳ ಒಂದು ಹುದ್ದೆಯೂ ಖಾಲಿ ಇರದಂತೆ ನೋಡಿಕೊಳ್ಳಲು ಅವರು ಆರೋಗ್ಯ ಇಲಾಖೆಗೆ ಆಡಳಿತದ 'ಚುಚ್ಚುಮದ್ದು' ನೀಡಿ ಕಾಯಕಲ್ಪ ಮಾಡಿದರೆ ಅಷ್ಟೇ ಸಾಕು ಅವರು ಪಡೆದ 'ಗೌ.ಡಾ.' ಸಾರ್ಥಕ. ಇಲ್ಲದಿದ್ದರೆ ಹಳೆಯ ಗೌಡರ ಮನೆಯಿಂದ ಹೊಸ ಗೌಡರ ಮನೆಗೆ ದಾಪುಗಾಲಿಡುವ 'ಘೋಡಾ'ಗಳ ಪಡೆ ನಾಡನ್ನು ಎಲ್ಲಿಗೆ ಎಳೆದುಕೊಂಡು ಹೋಗುವುದೋ ಹೇಳುವುದು ಕಷ್ಟ!


ಇಲ್ಲಿ ಯೋಚಿಸಬೇಕಾದವರು ಯಡಿಯೂರಪ್ಪನವರಿಗಿಂತ ಹೆಚ್ಚಾಗಿ ಸ್ವಾಮಿಗಳವರು. ಭಕ್ತಿಭಂಡಾರಿ ಬಸವಣ್ಣ, ವೈರಾಗ್ಯನಿಧಿ ಅಕ್ಕಮಹಾದೇವಿ, ಅನುಭಾವಿ ಅಲ್ಲಮ, ಆಚಾರ್ಯ ಶಂಕರ, ಆಚಾರ್ಯ ಮಧ್ವ ಎಂದರೆ ಹೇಗಿರುತ್ತೆ? ಡಾ॥ ಬಸವಣ್ಣ, ಡಾ॥ ಅಕ್ಕಮಹಾದೇವಿ, ಡಾ॥ ಅಲ್ಲಮ, ಡಾ॥ ಶಂಕರ, ಡಾ॥ ಮಧ್ವ ಎಂದರೆ ಹೇಗಿರುತ್ತೆ? ನಾಡಗೀತೆ ಈಗಲೇ ದೊಡ್ಡದಾಗಿದೆಯೆಂಬ ದೂರಿದೆ, ಆ ವಿಚಾರ ಬೇಡ. ಈ ಹಿನ್ನೆಲೆಯಲ್ಲಿ ಸ್ವಾಮಿಗಳಾದವರು ಶಿಷ್ಯರಿಂದ ದೊರೆತ 'ಗುರುತ್ವ'ದ ಪಟ್ಟ ದೊಡ್ಡದೋ, ವಿಶ್ವವಿದ್ಯಾನಿಲಯಗಳಿಂದ ಪಡೆದ 'ಗೌರವ ಡಾಕ್ಟರೇಟ್' ಪದವಿ ದೊಡ್ಡದೋ? ಚಿಂತಿಸುವುದು ಒಳಿತು. ನಮ್ಮ ಹೆಸರಿನ ಜೊತೆಗೆ ಅಂಟಿಕೊಂಡಿರುವ 'ಡಾ.' ಪದ ಸಂಪಾದಕರು ಹೊಸಗನ್ನಡಕ್ಕೆ ಕೊಡುಗೆಯಾಗಿ ನೀಡಿರುವ ವಿನೂತನ ಪದ "ಗೌ.ಡಾ." ಅಲ್ಲ, ಸ್ವಾಮಿಗಳಾಗುವುದಕ್ಕಿಂತ ಮುಂಚೆ ಯು.ಜಿ.ಸಿ. ಯಿಂದ ಜೂನಿಯರ್ ರಿಸರ್ಚ್ ಫೆಲೋಷಿಪ್ ಪಡೆದು ಬೆನಾರಸ್ ಹಿಂದೂ ವಿಶ್ವವಿದ್ಯಾನಿಲಯದಲ್ಲಿ ಆರೇಳು ವರ್ಷ ಕಷ್ಟಪಟ್ಟು ಅಧ್ಯಯನ ಮಾಡಿ ಸಂಪಾದಿಸಿದ Ph.D ಪದವಿಯ ಪಳೆಯುಳಿಕೆ. ನಮ್ಮ ದೃಷ್ಟಿಯಲ್ಲಿ ಅದು ಈಗ ನಮ್ಮ ಹೆಸರಿನ ಹಿಂದೆ ಇದ್ದರೂ ಒಂದೇ, ಇಲ್ಲದಿದ್ದರೂ ಒಂದೇ. ಯಾವುದೇ ಬಡ್ತಿಗೆ ಅರ್ಜಿ ಸಲ್ಲಿಸಿ ಹೆಚ್ಚಿನ ಡಿ.ಎ. ಪಡೆಯಬೇಕಾಗಿಲ್ಲ. ಯಾವುದೇ ವಿಶ್ವವಿದ್ಯಾನಿಲಯದ ಉಪಕುಲಪತಿಯ ಸ್ಥಾನಕ್ಕೆ bio-data ಸಲ್ಲಿಸಬೇಕಾಗಿಲ್ಲ. ಪಾಶ್ಚಾತ್ಯ ವಿಶ್ವವಿದ್ಯಾನಿಲಯಗಳಲ್ಲಿ ವಿಶೇಷ ಉಪನ್ಯಾಸಗಳನ್ನು ನೀಡಲು ಹೋದಾಗ ಅಲ್ಲಿಯ ವಿದ್ವಾಂಸರು ನಮ್ಮನ್ನು ಪ್ರೊಫೆಸರ್ ಎಂದು ವಿದ್ಯಾರ್ಥಿಗಳಿಗೆ ಪರಿಚಯಿಸಿದ ಸಂದರ್ಭಗಳೂ ಉಂಟು. 1994 ರಲ್ಲಿ ಆಸ್ಟ್ರೇಲಿಯಾದ ಮೆಲ್ಬೋರ್ನ್ ವಿಶ್ವವಿದ್ಯಾನಿಲಯದಲ್ಲಿ ನಡೆದ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಹತ್ತನೆಯ ವಿಶ್ವಸಂಸ್ಕೃತ ಸಮ್ಮೇಳನದ ಗೌರವಾಧ್ಯಕ್ಷರಾಗಿ ನಾವು ಆಯ್ಕೆಯಾದ ನಂತರ ಕಾರ್ಯನಿರ್ವಹಿಸುವ ಸಂದರ್ಭದಲ್ಲಿ ದೆಹಲಿಯ ಲಾಲ್ ಬಹದ್ದೂರ್ ಶಾಸ್ತ್ರಿ ಸಂಸ್ಕೃತ ವಿಶ್ವವಿದ್ಯಾನಿಲಯದ ಕುಲಪತಿ (Chancellor) ಸ್ಥಾನಕ್ಕೆ ನಮ್ಮ ಹೆಸರು ಆಯ್ಕೆಯಾಗಿತ್ತು. ಈ ವಿಚಾರ ಕೇಂದ್ರ ಸರ್ಕಾರದ Human Resource Ministry ಯ ಒಂದು ಮೀಟಿಂಗಿಗೆ ಹೋದಾಗ ತಿಳಿಯಿತು. "You are setting a bad precedence and also inviting trouble" ಎಂದು ಸೌಜನ್ಯದಿಂದ ನಿರಾಕರಿಸಿ ಇತರೆ ಸಂಸ್ಕೃತವಿದ್ವಾಂಸರ ಹೆಸರನ್ನು ನಾವು ಸೂಚಿಸಿದ್ದು ನಮ್ಮ ನಿಕಟವರ್ತಿಗಳಿಗೆ ಮಾತ್ರ ಗೊತ್ತೇ ಹೊರತು ಮಾಧ್ಯಮದವರಿಗೆ ಗೊತ್ತಿಲ್ಲ.

ವಿಶ್ವವಿದ್ಯಾನಿಲಯಗಳು ನೀಡುವ ಗೌರವ ಡಾಕ್ಟರೇಟ್ ಪದವಿಯನ್ನು ಸಂಪಾದಕರು ಆಲದ ಹೂವಿಗೆ ಹೋಲಿಸಿದ್ದಾರೆ. ಆಲದ ಹೂವು ಹೂವಲ್ಲ ಎಂಬ ನಾಣ್ಣುಡಿ ಇರುವುದೇನೋ ನಿಜ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ 'ಆಲಕ್ಕೆ ಹೂವಿಲ್ಲ' ಎಂದೇ ಜನಪದಗೀತೆ ಹೇಳುತ್ತದೆ. ಆದರೆ ಗಿಡಮರಗಳ ಹೂವನ್ನು ಹೂವಲ್ಲ ಎಂದು ನಿರಾಕರಿಸುವುದು ಹೇಗೆ? ಇದಕ್ಕೆ ಕಾರಣ ಏನಿರಬಹುದೆಂದು ತಿಳಿಯಲು ಅನೇಕ ವಿದ್ವಾಂಸರನ್ನು ಸಂಪರ್ಕಿಸಿದರೂ 'ಇದಮಿತ್ಥಂ' ಎಂಬ ಖಚಿತ ಉತ್ತರ ಸಿಗಲಿಲ್ಲ. ಹೂವಿನಲ್ಲಿರಬೇಕಾದ ವಿಶೇಷ ಗುಣಗಳಾದ ಸೌಂದರ್ಯ, ಮಕರಂದ, ಸುವಾಸನೆ (ತರ್ಕಶಾಸ್ತ್ರದ ಪ್ರಕಾರ ರೂಪ, ರಸ, ಗಂಧ) ಆಲದ ಹೂವಿನಲ್ಲಿ ಇಲ್ಲ. ಆಲದ ಮರವು ವಟವೃಕ್ಷವೆಂದು ಸ್ವತಃ ಪೂಜಾರ್ಹ. ಆದರೆ ಅದರ ಹೂವು ಮಾತ್ರ ಪೂಜೆಗೆ ನಿಷಿದ್ಧವಲ್ಲದಿದ್ದರೂ ಬಳಕೆಯಲ್ಲಿಲ್ಲ. ಈ ಹಿನ್ನೆಲೆಯಲ್ಲಿ ಆಲದ ಹೂವಿಗೆ ಹೂವಿನ ಪಟ್ಟ ತಪ್ಪಿದೆಯೇ ಹೊರತು ಅದನ್ನು ಹೂವಲ್ಲ ಎಂದು ಅಲ್ಲಗಳೆಯಲು ಬರುವುದಿಲ್ಲ. ನೀವು ಪೂಜೆಗೆ ಬಳಸಿ, ಬಿಡಿ, ಪ್ರಾಕೃತಿಕವಾಗಿ ಯಾವುದೇ ಗಿಡಮರದ ಹೂವನ್ನು ಹೂವು ಎಂದು ಒಪ್ಪಿಕೊಳ್ಳಲೇಬೇಕಾಗುತ್ತದೆ. ಅದರ ಉಪಯುಕ್ತತೆ ಏನೇ ಇರಲಿ.

ಈಗ ನಾವು ಹೇಳಹೊರಟಿರುವುದು ಆಲದ ಹೂವನ್ನು ಕುರಿತು ಅಲ್ಲ, ಕಾಗದದ ಹೂವನ್ನು ಕುರಿತು. ಕಾಗದದ ಹೂವು ನೂರಕ್ಕೆ ನೂರು ಹೂವಲ್ಲ ಎಂಬುದಂತೂ ನಿರ್ವಿವಾದ ಸಂಗತಿ. ಕಾಗದದ ಹೂವು ಇಲ್ಲದಿದ್ದಾಗ 'ಆಲದ ಹೂ ಹೂವಲ್ಲ' ಎಂಬ ಮಾತು ಚಾಲ್ತಿಗೆ ಬಂದಿರಬಹುದು. ಈಗ ಅದನ್ನು ಬದಲಾಯಿಸಿ 'ಕಾಗದದ ಹೂ ಹೂವಲ್ಲ' ಎಂಬ ನುಡಿಗಟ್ಟನ್ನು ಜಾರಿಗೆ ತರುವುದು ಒಳ್ಳೆಯದು ಎನಿಸುತ್ತದೆ. ಹಾಗೆ ನೋಡಿದರೆ ಎಷ್ಟೋವೇಳೆ ಕಾಗದದ ಹೂವುಗಳು ನಿಜವಾದ ಹೂವೆಂದು ಭ್ರಮಿಸುವಷ್ಟು ಸುಂದರವಾಗಿರುತ್ತವೆ. ಅವುಗಳನ್ನು ಮುಟ್ಟಿದಾಗಲೂ ಗೊತ್ತಾಗುವುದಿಲ್ಲ; ಮೂಗಿನಿಂದ ಆಘ್ರಾಣಿಸಿದಾಗ ಮಾತ್ರ ಅದು ಕಾಗದದ ಹೂವೆಂದು ತಿಳಿಯುತ್ತದೆ. ಇಂದು ನಾಡಿನಾದ್ಯಂತ ವಿಶ್ವವಿದ್ಯಾನಿಲಯಗಳಿಂದ ಡಾಕ್ಟರೇಟ್ ಪದವಿಗೆ ಸ್ವೀಕೃತವಾಗುತ್ತಿರುವ Ph.D ಮಹಾಪ್ರಬಂಧಗಳು ಬಹುತೇಕ ಇಂತಹ ಕಾಗದದ ಹೂವುಗಳು. 'ಇಂಟರ್‌ನೆಟ್‌ನಲ್ಲಿ ಫಾರಂ ಭರ್ತಿಮಾಡಿ 18 ಡಾಲರ್ ಪಾವತಿಸಿದರೆ ಕ್ಷಣಾರ್ಧದಲ್ಲಿ ಗೌರವ ಡಾಕ್ಟರೇಟ್ ದೊರೆಯುತ್ತದೆ' ಎಂಬುದು ಎಷ್ಟು ಸತ್ಯವೋ, ಹತ್ತಾರು ಸಾವಿರ ರೂ.ಗಳನ್ನು ಪಾವತಿಸಿದರೆ Ph.D ಮಹಾಪ್ರಬಂಧವನ್ನು ಬರೆದುಕೊಡುವ 'ಮಹಾಮಹೋಪಾಧ್ಯಾಯ'ರು ನಮ್ಮ ನಾಡಿನಲ್ಲಿದ್ದಾರೆಂಬುದೂ ಅಷ್ಟೇ ಸತ್ಯ. ಹೇಗೂ ಘಟಿಕೋತ್ಸವದಲ್ಲಿ ಬಾಡಿಗೆಗೆ ರೆಡಿಮೇಡ್ ಗೌನ್ ಸಿಕ್ಕೇ ಸಿಕ್ಕುತ್ತದೆ, ಸ್ವಂತಕ್ಕೆ ಹೊಲಿಸಿಕೊಳ್ಳಬೇಕಾದ ಪ್ರಮೇಯವೇ ಇಲ್ಲ! ಮದುವೆಗೆ ಯಾರದೋ ಕೋಟನ್ನು ಹಾಕಿಕೊಂಡ ಎಡಬಿಡಂಗಿ ಗಂಡಿನ ನೆನಪಾಗುತ್ತದೆ.

ಪ್ರಾಚೀನ ವಿದ್ಯಾಕೇಂದ್ರವಾದ ಕಾಶಿಯಲ್ಲಿ ಮೂರು ಆಧುನಿಕ ವಿಶ್ವವಿದ್ಯಾನಿಲಯಗಳಿವೆ. ಒಂದು ಗಾಂಧಿಜೀಯ ನಿಕಟವರ್ತಿಗಳಾದ ಪಂಡಿತ್ ಮದನ್ ಮೋಹನ್ ಮಾಲವೀಯಜೀ ಅವರು ಸ್ಥಾಪಿಸಿದ ಜಗತ್ಪ್ರಸಿದ್ಧವಾದ ಬೆನಾರಸ್ ಹಿಂದೂ ಯೂನಿವರ್ಸಿಟಿ. ಇದನ್ನು ಕಾಶೀ ಹಿಂದೂ ವಿಶ್ವವಿದ್ಯಾನಿಲಯ ಎಂದೂ ಕರೆಯುತ್ತಾರೆ. ಸ್ಥಳೀಯವಾಗಿ ಇದಕ್ಕೆ B.H.U ಎಂಬ ರೂಢನಾಮವಿದೆ. ಎರಡನೆಯದು ಮಹಾತ್ಮಾ ಗಾಂಧೀ ಕಾಶೀ ವಿದ್ಯಾಪೀಠ ವಿಶ್ವವಿದ್ಯಾನಿಲಯ. ಮೂರನೆಯದು ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾನಿಲಯ. ನಾವು ಸಂಸ್ಕೃತದಲ್ಲಿ ಸ್ನಾತಕೋತ್ತರ ಪದವಿ ಮತ್ತು ಡಾಕ್ಟರೇಟ್ ಪದವಿಯನ್ನು ಪಡೆದದ್ದು ಮೊದಲನೆಯದಾದ ಬೆನಾರಸ್ ಹಿಂದೂ ಯೂನಿವರ್ಸಿಟಿಯಿಂದ. ನಮ್ಮ ಸಂಶೋಧನಾ ಪ್ರಬಂಧದ ವಿಷಯ: "A Critical Study of the Suta-Samhita". ನಮ್ಮ ಸಂಶೋಧನೆಗೆ ಮಾರ್ಗದರ್ಶಕಿಯಾಗಿದ್ದವರು (Research Guide) ಆಗಿನ ಸಂಸ್ಕೃತ ಪ್ರಾಧ್ಯಾಪಕಿ ಡಾ॥ ಪದ್ಮಾ ಮಿಶ್ರ ಅವರು; 'The Wonder that was India' ಎಂಬ ಪುಸ್ತಕವನ್ನು ಬರೆದ ಹೆಸರಾಂತ ಇತಿಹಾಸಜ್ಞ ಪ್ರೊಫೆಸರ್ A.L. Basham ರವರ ಮಾರ್ಗದರ್ಶನದಲ್ಲಿ ಲಂಡನ್ ವಿಶ್ವವಿದ್ಯಾನಿಲಯದಿಂದ ಡಾಕ್ಟರೇಟ್ ಪದವಿ ಪಡೆದವರು. ನಮ್ಮ ಮಹಾಪ್ರಬಂಧವನ್ನು (thesis) ಆಮೂಲಾಗ್ರವಾಗಿ ಓದಿ ಅದರಲ್ಲಿರುವ ಅರ್ಧವಿರಾಮ, ಪೂರ್ಣವಿರಾಮಾದಿಗಳನ್ನೂ ತಿದ್ದುತ್ತಿದ್ದ ಪ್ರೊಫೆಸರ್ ಪದ್ಮಾ ಮಿಶ್ರ ಅವರು ನಮಗೆ ಹೀಗೆ ಕಿವಿ ಮಾತು ಹೇಳಿದ್ದರು: **"ವಿಚಾರಗಳು ಆಲೋಚನಾಹಂತದಲ್ಲಿ ಸ್ಫುಟವಾಗಿರುವುದಿಲ್ಲ, ಮಸಕು ಮಸಕಾಗಿರುತ್ತವೆ. ಬರೆಯುವುದರಿಂದ ಅವುಗಳಿಗೆ ಸ್ಪಷ್ಟವಾದ ರೂಪ, ನಿಖರತೆ ಬರುತ್ತದೆ. ನೀನು ಬರೆದದ್ದನ್ನು ಬೇರೆಯವರಿಗೆ ಓದಲು ಕೊಡು. ಅವರು ಏನು ಅರ್ಥಮಾಡಿಕೊಳ್ಳುತ್ತಾರೆಂದು ಗಮನಿಸು. ವಿವರಣೆಯನ್ನು ನೀಡಲು ಹೋಗಬೇಡ. ನೀನು ಏನನ್ನು ಬರೆದಿದ್ದೇನೆಂದು ತಿಳಿದುಕೊಂಡಿದ್ದೀಯೋ ಅದನ್ನು ಅವರು ಸರಿಯಾಗಿ ಗ್ರಹಿಸಿದರೆ ನೀನು ಬರೆದದ್ದು ಸರಿ. ಇಲ್ಲದಿದ್ದರೆ ನಿನ್ನ ಬರವಣಿಗೆಯಲ್ಲಿ ದೋಷವಿದೆಯೆಂದು ಪರಿಭಾವಿಸಿ ಓದುಗರಿಗೆ ನೀನಂದುಕೊಂಡ ಅರ್ಥ ತಿಳಿಯುವವರೆಗೂ ತಿದ್ದಿ ಬರೆಯಲು ಪ್ರಯತ್ನಿಸು."** ಆದಕಾರಣ ನಮ್ಮ ಬರವಣಿಗೆ ನಿಧಾನ. ಅವಸರದಲ್ಲಿ ಬರೆಯಲು ಮನಸ್ಸು ಒಪ್ಪುವುದಿಲ್ಲ. 'ಸಂತೆಗೆ ಮೂರು ಮೊಳ ನೇಯುವ' ಜಾಯಮಾನ ನಮ್ಮದಲ್ಲ. ಹೀಗಾಗಿ ಒಂದು ಸಣ್ಣ ಮುನ್ನುಡಿಯನ್ನೂ ಸಹ ಸಕಾಲದಲ್ಲಿ ಬರೆದು ಕಳುಹಿಸಲಾಗದೆ ಅನೇಕ ಸಾಹಿತ್ಯಾಸಕ್ತರು ನಮ್ಮೊಂದಿಗೆ ಮುನಿಸಿಕೊಂಡಿರುವುದುಂಟು.


ನಮ್ಮ ಸಂಶೋಧನೆಗೆ ಆಯ್ಕೆಮಾಡಿಕೊಂಡ 'ಸೂತಸಂಹಿತಾ' ಎಂಬ ಸಂಸ್ಕೃತ ಗ್ರಂಥ ಅಷ್ಟಾದಶ ಪುರಾಣಗಳಲ್ಲಿ ಪ್ರಸಿದ್ಧವಾದ 13 ನೆಯ ಮಹಾಪುರಾಣವಾದ ಸ್ಕಂದಪುರಾಣದ ಒಂದು ಭಾಗ. ಶಂಕರಾಚಾರ್ಯರು ವೇದಾಂತಸೂತ್ರಗಳ ಮೇಲೆ ತಮ್ಮ ಭಾಷ್ಯವನ್ನು ಬರೆಯುವ ಮುನ್ನ ಸ್ಕಂದಪುರಾಣಾಂತರ್ಗತವಾದ ಈ ಸೂತಸಂಹಿತೆಯನ್ನು 18 ಬಾರಿ ಓದಿ ಮನನ ಮಾಡಿಕೊಂಡಿದ್ದರೆಂಬ ಐತಿಹ್ಯವಿದೆ:




**ತಾಮಷ್ಟಾದಶಧಾಲೋಕ್ಯ ಶಂಕರಃ ಸೂತಸಂಹಿತಾಂ ।**
**ಚಕ್ರೇ ಶಾರೀರಕಂ ಭಾಷ್ಯಂ ಸರ್ವವೇದಾಂತನಿರ್ಣಯಂ ॥**

ಆರೇಳು ವರ್ಷಗಳ ಕಾಲ ಕಷ್ಟಪಟ್ಟು ಓದಿ 1976 ರಲ್ಲಿ ಪಿ.ಎಚ್.ಡಿ ಪದವಿಯನ್ನು ಪಡೆದಾಗ ನಮ್ಮ ಲಿಂಗೈಕ್ಯ ಗುರುವರ್ಯರು ತುಂಬಾ ಸಂತೋಷಪಟ್ಟು 'ಜಗದ್ಗುರು'ವಾಗುವವನು ಜಗತ್ತನ್ನು ಸುತ್ತಿ ಬರಬೇಕು ಎಂದು ಹೇಳಿ ಪಾಶ್ಚಾತ್ಯ ದೇಶಗಳಲ್ಲಿ ಓದಲು ಪ್ರೋತ್ಸಾಹಿಸಿದರು. ಮಠದಿಂದ ಹಣವನ್ನು ಪಡೆದು ಪರದೇಶದಲ್ಲಿ ಓದಲು ನಮಗೆ ಸುತರಾಂ ಇಷ್ಟವಿರಲಿಲ್ಲ. ಸಂಸ್ಕೃತಕ್ಕೆ ಎರಡನೆಯ ತವರೂರಾದ ಜರ್ಮನಿಯಲ್ಲಿ ಓದಲು DAAD ಸಂಸ್ಥೆಗೆ ಅರ್ಜಿ ಸಲ್ಲಿಸಿ ಸ್ಕಾಲರ್‌ಷಿಪ್‌ಗಾಗಿ ಪ್ರಯತ್ನಿಸಿದೆವು. ನಮ್ಮ ಸುದೈವಕ್ಕೆ ಎರಡು ವರ್ಷಗಳ ಕಾಲ ವಿಯೆನ್ನಾ ವಿಶ್ವವಿದ್ಯಾಲಯದಲ್ಲಿ ಉನ್ನತ ಅಧ್ಯಯನವನ್ನು ಮಾಡಲು ನಮಗೆ ವಿಯೆನ್ನಾದ ಆಫ್ರೋ ಏಷಿಯನ್ ಸಂಸ್ಥೆಯಿಂದ (AAI) ಫೆಲೋಷಿಪ್ ಮುಂಜೂರಾಗಿ ಬಂದಿತ್ತು. ಇದಕ್ಕೆ ಕಾರಣ ವಿಯೆನ್ನಾ ವಿಶ್ವವಿದ್ಯಾನಿಲಯದ ಸಂಸ್ಕೃತ ಪ್ರೊಫೆಸರ್ ಆಗಿದ್ದ ಡಾ॥ ಗೆರ್‌ಹಾರ್ಡ್ ಓಬರ್‌ಹಾಮರ್‌ರವರು ನಮ್ಮ Ph.D ಮಹಾಪ್ರಬಂಧದ ಬಾಹ್ಯಪರೀಕ್ಷಕರಾಗಿ ಮೆಚ್ಚಿಕೊಂಡಿದ್ದರೆಂಬ ಸಂಗತಿ ವಿಯೆನ್ನಾಕ್ಕೆ ಹೋದಮೇಲೆ ತಿಳಿಯಿತು.

ಇಷ್ಟೆಲ್ಲಾ ಕಷ್ಟಪಡದೆ Ph.D ಪದವಿ ಪಡೆಯಲು ಬೇರೊಂದು ಸುಲಭೋಪಾಯವಿದೆಯೆಂದು ಮೂರು ದಶಕಗಳ ಹಿಂದೆಯೇ ಕೇಳಿದ್ದರೂ ಆ ಜಾಡಿನಲ್ಲಿ ನಮ್ಮ ಸಂಶೋಧನೆ ಸಾಗಲೇ ಇಲ್ಲ. ಕಾಶಿಯಿಂದ ವಿಯೆನ್ನಾಕ್ಕೆ ಉನ್ನತ ಅಧ್ಯಯನಕ್ಕೆಂದು ಹೋದ ಮೇಲೆ ಈ ಸುಲಭೋಪಾಯವನ್ನು ಅನುಸರಿಸಿ ಆಂಗ್ಲಭಾಷೆಯಲ್ಲಿದ್ದ ನಮ್ಮ ಮಹಾಪ್ರಬಂಧವನ್ನು 'ಸೂತಸಂಹಿತಾ ಕಾ ಆಲೋಚನಾತ್ಮಕ್ ಅಧ್ಯಯನ್' ಎಂದು ಹಿಂದಿಯಲ್ಲಿ ಸಂಪೂರ್ಣವಾಗಿ ಭಟ್ಟಿ ಇಳಿಸಿ ಬೇರೊಬ್ಬ 'ಸಂಶೋಧಕ' ಅದೇ ಕಾಶಿಯಲ್ಲಿರುವ 'ಮಹಾತ್ಮಾ ಗಾಂಧೀ ಕಾಶೀ ವಿದ್ಯಾಪೀಠ' ಎಂಬ ಬೇರೊಂದು ವಿಶ್ವವಿದ್ಯಾನಿಲಯದಿಂದ 1981 ರಲ್ಲಿ ಡಾಕ್ಟರೇಟ್ ಪದವಿ ಪಡೆದಿದ್ದಾನೆಂಬ ಸಂಗತಿ ಎರಡು ವರ್ಷಗಳ ಹಿಂದೆಯಷ್ಟೇ ನಮಗೆ ತಿಳಿದುಬಂದಿರುತ್ತದೆ. ಈ ಕುಸಂಸ್ಕೃತ 'ಸಂಶೋಧಕ' ಉತ್ತರಪ್ರದೇಶದ ಗಾಜೀಪುರದ ರೇವತೀಪುರದಲ್ಲಿರುವ ಬಹ್ಮರ್ಷಿ ಸಂಸ್ಕೃತ ಮಹಾವಿದ್ಯಾಲಯದ 'ಭೂತ'ಪೂರ್ವ ಪ್ರಧಾನಾಚಾರ್ಯ, ವ್ಯಾಕರಣ-ವೇದಾಂತ-ಸಾಹಿತ್ಯಾಚಾರ್ಯ ಇತ್ಯಾದಿ ಬಿರುದಾಂಕಿತ ಡಾ॥ ರಮಾಕಾಂತ ಝಾ! ಈತನಿಗೆ ನಿರ್ದೇಶಕರಾಗಿದ್ದವರು ಕಾಶೀವಿದ್ಯಾಪೀಠದ ಸಂಸ್ಕೃತವಿಭಾಗದ ಮುಖ್ಯಸ್ಥರೂ ಮತ್ತು ಪ್ರೊಫೆಸರ್ ಆದ ಡಾ॥ ಅಮರನಾಥ ಪಾಂಡೆ ಎಂದು ತಿಳಿದುಬಂದಿರುತ್ತದೆ. ಈ ಪ್ರಬಂಧವನ್ನು ವಾರಾಣಸಿಯ ಪ್ರಸಿದ್ಧ ಪ್ರಕಾಶನಸಂಸ್ಥೆಯಾದ 'ಚೌಖಾಂಬಾ ವಿದ್ಯಾಭವನ' 2005 ರಲ್ಲಿ "ಸೂತಸಂಹಿತಾ-ಮೀಮಾಂಸಾ" ಎಂಬ ಶಿರೋನಾಮೆಯಲ್ಲಿ ಪ್ರಕಟಿಸಿರುತ್ತದೆ (ರೂ. 300). ಈ ಪುಸ್ತಕದ ಮಾಹಿತಿಯು ನಮ್ಮ ಆಗಿನ ಆತ್ಮೀಯ ಒಡನಾಡಿಗಳಾಗಿದ್ದ ಬೃಂದಾವನದಲ್ಲಿರುವ ಚೈತನ್ಯಸಂಪ್ರದಾಯದ ಶ್ರೀ ಶ್ರೀವತ್ಸ ಗೋಸ್ವಾಮಿಯವರಿಂದ ಈ-ಮೇಲ್‌ನಲ್ಲಿ ತಿಳಿದುಬಂದು ಪುಸ್ತಕವನ್ನು ತರಿಸಿಕೊಂಡು ಓದಿದೆವು. ಆಂಗ್ಲಭಾಷೆಯಲ್ಲಿರುವ ನಮ್ಮ ಅಪ್ರಕಟಿತ ಮಹಾಪ್ರಬಂಧದ ಒಂದೊಂದೇ ಸಾಲನ್ನು ಪುಸ್ತಕದ ಸಾಲುಗಳಿಗೆ ಹೋಲಿಸಿ



ಕೆಂಪು ಶಾಹಿಯಲ್ಲಿ ಗುರುತುಮಾಡುತ್ತಾ ಹೋದಾಗ ಆರಂಭದಿಂದ ಕೊನೆಯವರೆಗೆ ನಮ್ಮ ಲೇಖನಿಯನ್ನು ಮೇಲೆತ್ತಲು ಆಗಲಿಲ್ಲ! ಪುಸ್ತಕದ ಒಟ್ಟು 285 ಪುಟಗಳಲ್ಲಿ ಆರಂಭದ ಭೂಮಿಕೆ ಮತ್ತು ಕೊನೆಯ ಉಪಸಂಹಾರವನ್ನು ಬಿಟ್ಟರೆ ಉಳಿದ 250 ಪುಟಗಳು ನಮ್ಮ ಪ್ರಬಂಧದ 80% ರಷ್ಟು ಭಾಗವನ್ನು ಕದ್ದು ಹಿಂದಿಯಲ್ಲಿ ಬರೆದ ಸಾಲುಗಳು. ಆಸಕ್ತರು ಅಂತರಜಾಲದಲ್ಲಿರುವ "An Easy Way to get a Ph.D Degree from the Universities!" ಎಂಬ ನಮ್ಮ ಲೇಖನವನ್ನು ನೋಡಬಹುದು (www.taralabalu.org).

ಕಾಶಿಯಲ್ಲಿ ಸ್ನಾತಕೋತ್ತರ ಪದವಿ ಪರೀಕ್ಷೆ ಮುಗಿಯುತ್ತಿದ್ದಂತೆ 'ಮುಂದೇನು ಮಾಡುತ್ತೀಯಾ?' ಎಂದು ಸಹಪಾಠಿಯೊಬ್ಬನನ್ನು ಕೇಳಿದಾಗ **'ದೇಖೂಂಗಾ, ನೌಕರೀ ಊಕರೀ ಕರನೇ ಖೋಶಿಶ್ ಕರೂಂಗಾ. ಅಗರ್ ನ ಹೀಂ ಮಿಲೇಗೀ ತೋ ಪಿ.ಎಚ್.ಡಿ ಕರೂಂಗಾ!'** (ನೋಡ್ತೀನಿ, ಏನಾದರೂ ನೌಕರಿ ಮಾಡೋಕೆ ಪ್ರಯತ್ನ ಮಾಡ್ತೀನಿ. ಸಿಗದೇ ಹೋದರೆ ಪಿ.ಎಚ್.ಡಿ ಮಾಡ್ತೀನಿ!) ಎಂದು ಹೇಳಿದ ಮಾತು ನಮಗೆ ಈಗ ನೆನಪಾಗುತ್ತಿದೆ. ಸಂಶೋಧನೆಗೆಂದು ಹೆಸರನ್ನು ನೊಂದಾಯಿಸುವವರ ಮನೋಧರ್ಮ ಹೇಗಿದೆ ಎಂಬುದು ಇದರಿಂದ ಸ್ಪಷ್ಟ. ಕಳೆದ ಮೂರು ದಶಕಗಳಲ್ಲಿ ಅದೆಷ್ಟೋ ನೀರು ಗಂಗೆಯಲ್ಲಿ ಹರಿದಿದೆ. ಇಂತಹ ಕೃತಿಚೌರ್ಯದ ಪಾಪರಾಶಿಯು ಕಾಶಿಯ ಪಾವನ ಗಂಗೆಯಿಂದ ತೊಳೆಯಲಾಗದೆ ಕೃಷ್ಣಾ-ಕಾವೇರಿವರೆಗೂ ತೇಲಿಬಂದು ನಮ್ಮ ರಾಜ್ಯದ ವಿಶ್ವವಿದ್ಯಾನಿಲಯಗಳಲ್ಲಿಯೂ ಕೊಳೆತು ನಾರುತ್ತಿದೆ! What a disgraceful academic fraud!

**31.12.2008**

**ಶ್ರೀ ತರಳಬಾಳು ಜಗದ್ಗುರು**
**ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು**
**ಸಿರಿಗೆರೆ**

❑